ಪೊಲೀಸರು ಬಿದ್ದೂನಾಯ್ಕನ ಮನೆಯನ್ನು ಅಟ್ಯಾಕ್ ಮಾಡಿದರಂತೆ. ಸುಮತಿ ತನ್ನ ಸಂಗಡಿಗರೊಂದಿಗೆ ತಪ್ಪಿಸಿಕೊಂಡಳಂತೆ. ಆದರೆ, ಫೈರಿಂಗ್‌ನಲ್ಲಿ ಬಿದ್ದೂನಾಯ್ಕ ಸತ್ತನಂತೆ...'' ನಾನಿನ್ನೂ ಹೇಳುವುದು ಸಾಕಷ್ಟು ಇತ್ತು. ''ಸಾಕು ನಿಲ್ಸು, ಹಾಳಾಗಿ ಹೋಗ್ಲಿ. ಮನುಷ್ಯ ಸಾಯುವುದಕ್ಕೆ ಕೆಲವೊಮ್ಮೆ ಕಾರಣಗಳೇ ಬೇಕಿಲ್ಲ ಅನ್ಸುತ್ತೆ. ನಾನು ವಾರಣಾಸಿಯಿಂದ ಸೀದಾ ಇಲ್ಲಿಗೆ ಬಂದಿದ್ದೆಂದು ಭೇಟಿಯಾದಾಗಲೇ ನಿನಗೆ ಹೇಳಿದ್ದೆ. ಆ ಬಗ್ಗೆ ನೀನು ಕೇಳಲೇ ಇಲ್ಲ'' ತಣ್ಣಗೆ ಮುಖ ನೋಡಿದ್ದ. ''ವಾರಣಾಸಿಗೆ ಯಾರಾದರೂ ಏಕೆ ಹೋಗ್ತಾರೇಳು. ಅದೊಂದು ಕಾಮನ್‌ಸೆನ್ಸ್ ಅಲ್ವಾ. ಗಂಗೆಯಲ್ಲಿ ಮುಳುಗಿ ಕಾಶಿ ವಿಶ್ವನಾಥನ ದರ್ಶನ ಮಾಡೋದಕ್ಕೆ'' ಅಷ್ಟೇ ತಣ್ಣಗೆ ಹೇಳಿದ್ದೆ ನಾನು. ''ನೀನು ಒಮ್ಮೆಯಾದರೂ ವಾರಣಾಸಿಗೆ ಹೋಗಿದ್ದೀಯಾ?'' ಗಂಭೀರವಾಗಿ ಕೇಳಿದ್ದ. ''ಇಲ್ಲ, ಅಂಥ ಅವಕಾಶ ನನಗಿನ್ನೂ ಒದಗಿ ಬಂದಿಲ್ಲ. ಒಮ್ಮೆ ಹೋಗಿ ಬರಬೇಕೆಂಬ ಉದ್ದೇಶವಂತೂ ಇದೆ'' ಎಂದಿದ್ದೆ. ''ಆಲ್‌ರೈಟ್, ಯಾವಾಗಲಾದರೂ ಬಿಡುವು ಮಾಡಿಕೊಂಡು ಹೋಗಿ ಬಾ. ನಾನೂ ಇದೇ ಮೊದಲ ಬಾರಿ ಭೇಟಿ ಕೊಟ್ಟಿದ್ದು. ಎರಡು ತಿಂಗಳ ಹಿಂದೆ ತಾತ ಎಡ್ವರ್ಡ್ ತೀರಿಹೋದ. ಗಟ್ಟಿಪಿಂಡ ಮುದುಕನದು. ಸತ್ತಾಗ ತಾತನಿಗೆ ನೂರು ವರ್ಷವಾಗಿತ್ತು ನೋಡು. ತಾತ ಪ್ರಾವಿನ್ಷಿಯಲ್ ಕಮಿಷನರ್ ಆಗಿ ಇಂಡಿಯಾಕೆ ಬಂದಿದ್ದು ತನ್ನ ಇಪ್ಪತ್ತೈದನೆಯ ವಯಸ್ಸಿನಲ್ಲಿ. ಬರುವಾಗ ಮದುವೆಯಾಗಿ ಅಜ್ಜಿಯನ್ನೂ ಕರೆತಂದಿದ್ದ. ತಾತ ಅಲ್ಲಿಗೆ ಬಂದ ಮೂರು ವರ್ಷಗಳಲ್ಲೇ ಇಂಡಿಯಾಗೆ ಫ್ರೀಡಂ ಬಂತಂತೆ. ಆದರೆ, ತಾತ ಅಷ್ಟೊತ್ತಿಗಾಗಲೇ ಇಂಡಿಯಾದ ಬಗ್ಗೆ ಪ್ರೀತಿ ಬೆಳೆಸಿಕೊಂಡಿದ್ದನಂತೆ. ಹಾಗಾಗಿ, ಆರು ತಿಂಗಳು ಲಂಡನ್ನಿನಲ್ಲಿರುವ ಮತ್ತು ಆರು ತಿಂಗಳು ಇಂಡಿಯಾದಲ್ಲಿರುವ ಪ್ರಾಕ್ಟೀಸ್ ಬೆಳೆಸಿಕೊಂಡನಂತೆ. ಈಸ್ಟ್ ಇಂಡಿಯಾ ಕಂಪನಿಯ ಸಹಾಯದಿಂದ ತಾತ ಎಡ್ವರ್ಡ್ ಎಸ್ಟೇಟ್ ಅಭಿವೃದ್ಧಿಪಡಿಸುವುದರಲ್ಲಿ ತುಂಬಾ ಶ್ರಮಪಟ್ಟರಂತೆ. ಆಳುಗಳ ಜೊತೆ ತಾನೂ ಕಾಫಿತೋಟಗಳಲ್ಲಿ, ಕ್ಯೂರಿಂಗ್ ಫ್ಯಾಕ್ಟರಿಗಳಲ್ಲಿ ಕೆಲಸ ಮಾಡುತ್ತಿದ್ದನಂತೆ. ಕಾಫಿ ಎಕ್ಸ್‌ಪೋರ್ಟ್ ಬಿಸಿನೆಸಿನಲ್ಲೂ ತಾತ ಸಖತ್ ಯಶಸ್ಸು ಗಳಿಸಿಬಿಟ್ಟ. ಆ ಕಡೆ ಲಂಡನ್ನಿನಲ್ಲೂ ಬೇಕಾದಷ್ಟು ಆಸ್ತಿ, ಈ ಕಡೆ ಇಂಡಿಯಾದಲ್ಲೂ ಕೋಟ್ಯಂತರ ರೂಪಾಯಿ ಆಸ್ತಿ. ನಾನು ಚಿಕ್ಕವನಾಗಿದ್ದಾಗ ತಾತ ಎಸ್ಟೇಟಿನ ಎಲ್ಲಾ ಕೆಲಸಗಳಲ್ಲೂ ಬಿಡುವಿಲ್ಲದೆ ತೊಡಗಿಸಿಕೊಳ್ಳುತ್ತಿದ್ದದ್ದನ್ನು ಕಂಡಿದ್ದೀನಿ. ತಾತ ತನ್ನ ಎಸ್ಟೇಟಿನಲ್ಲಿ ಕೆಲಸ ಮಾಡುತ್ತಿದ್ದ ಎಲ್ಲಾ ಕೆಲಸಗಾರರನ್ನೂ ಬಹಳ ಚೆನ್ನಾಗಿ ನೋಡಿಕೊಳ್ಳುತ್ತಿದ್ದ. ಆದರೆ, ಸುಮಾರು ಜನರನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಮಾಡಿದ ಆಪಾದನೆ ತಾತನ ಮೇಲಿತ್ತಂತೆ. ತಾತನಿಗೆ ಆ ಬಗ್ಗೆ ಬೆದರಿಕೆಗಳೂ ಬಂದಿದ್ದವಂತೆ. ಮನುಷ್ಯನ ದೇಹ ಮತ್ತು ಮನಸ್ಸುಗಳನ್ನು ಮತಾಂತರ ಮಾಡುವುದಾದರೂ ಹೇಗೆ? ಓಹ್, ಮಾತು ಎಲ್ಲಿ ಎಲ್ಲಿಗೋ ಹೋಗುತ್ತಿದೆ. ಇರಲಿ, ತಾತನ ಶ್ರಾದ್ಧವನ್ನು ಕಾಶಿ ವಿಶ್ವನಾಥನ ಸನ್ನಿಧಿಯಲ್ಲಿಯೇ ಮಾಡಿ ಮುಗಿಸಬೇಕೆಂಬುದು ಅಮ್ಮನ ಆಸೆ. ಅಮ್ಮ ಹಿಂದೂ ಅಲ್ವಾ. ಅಪ್ಪನದು ಏನೂ ತಕರಾರಿಲ್ಲ. ಹಾಗಾಗಿ, ಫ್ಲೈಟ್ ಹತ್ತಿ ಬಂದು ಬಿಟ್ಟೆ.''

ಅವನ ಮಾತುಗಳು ದೀರ್ಘವೆನಿಸಿದರೂ ಭಾರ ಅಥವಾ ಬೇಸರ ಅನ್ನಿಸುತ್ತಿರಲಿಲ್ಲ. ''ಓಹ್, ಎಲ್ಲಾ ಸಾಂಗವಾಗಿ ಮುಗಿಯಿತಾ'' ಕೇಳಿದ್ದೆ ನಾನು. ಅವನು ಬೇಯಿಸಿದ ಶೇಂಗಾ ಬೀಜವನ್ನು ಬಾಯಿಗೆಸೆದುಕೊಂಡು ನಮಲಿ ಅದರೊಟ್ಟಿಗೆ ವಿಸ್ಕಿಯನ್ನು ಬಾಯಿಗೆ ಬಿಟ್ಟುಕೊಂಡು ಮುಕ್ಕಳಿಸಿ ನುಂಗಿ, ''ನಿಜಕ್ಕೂ ಕಾಶಿಯಲ್ಲಿನ ಗಂಗೆ ನನ್ನನ್ನು ವಿಪರೀತ ಗೊಂದಲಗಳಲ್ಲಿ ಮುಳುಗಿಸಿತು. ಜಗತ್ತಿನ ಪ್ರತಿಯೊಂದು ಸಂಗತಿಗಳೂ ನಡೆಯುತ್ತಿರುವುದು ನಂಬಿಕೆಯ ಮೇಲೆಯೇ ಎಂಬ ವಿಷಯ ಗಂಗಾ ನದಿಯ ಘಾಟ್‌ಗಳ ಮೆಟ್ಟಿಲುಗಳ ಮೇಲೆ ನಡೆಯುವಾಗ ಅರಿವಿಗೆ ಬಂತು ನನಗೆ. ಅಲ್ಲಿ ನಡೆದಾಡುತ್ತಿದ್ದರೆ ಯಾವುದೇ ವ್ಯಕ್ತಿಯಾಗಲೀ ದುಃಖ ಮತ್ತು ಸಂಭ್ರಮಗಳ ನಡುವಿನ ಒಂದು ವಿಚಿತ್ರ ಸ್ಥಾಯಿಯಲ್ಲಿ ಸಂಪೂರ್ಣವಾಗಿ ಮುಳುಗಿಬಿಡುವ ಸಂಭವವೇ ಹೆಚ್ಚು. ನಾನು ಶ್ರಾದ್ಧ ಮಾಡಿಸಿದ್ದು ಹರಿಶ್ಚಂದ್ರ ಘಾಟ್‌ನಲ್ಲಿ ಕುಳಿತಿದ್ದ ಸಾಧುವೊಬ್ಬನ ಹತ್ತಿರ. ನಮ್ಮ ತಾತ ಎಡ್ವರ್ಡ್‌ನನ್ನು ಸ್ವರ್ಗಕ್ಕೆ ಕಳಿಸುವ ಶ್ರಾದ್ಧದ ಕೆಲಸಕ್ಕೆ ಅವನು ಕೇಳಿದ್ದು ಸಾವಿರದ ಏಳುನೂರು ರೂಪಾಯಿ. ನಾನು ಆತನ